ಶ್ರೀ ಕೆ. ಎಚ್. ರಂಗನಾಥ್.—ಇದು ಊಹಾಪೋಹದ ಪ್ರಶ್ನೆಯಾಯಿತಂ. ತಮ್ಮ ತಾಲ್ಲೂಕಿನಲ್ಲಿ ನೀವು ಜವಾಬ್ದಾರಿಯನ್ನು ತೆಗೆದುಕೊಳ್ಳುವುದಾದರೆ ಅಲ್ಲಿ ಏನಂ ವ್ಯವಸ್ಥೆ ಬೇಕೋ ಅದನ್ನು ಮಾಡಿ ಕೊಡುತ್ತೇನೆ. ಪ್ರಾಡ್ಯೂಸ್ ಲೋನ್ ಬಗ್ಗೆ ತಾವು ಪತ್ರ ಬರೆಯುವುದಾದರೆ ಆ ಲೋನ್‌ನ್ನು ಕೊಡುತ್ತೇವೆ.

ಶ್ರೀ ಕೆ. ಎಚ್. ಹನುಮೇಗೌಡ.—ದುಡ್ಡು ಇಲ್ಲ ಗೋಡೌನ್ ಇಲ್ಲ, ಫೆಸಿಲಿಟೀಸ್ ಇಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಸದಸ್ಯರು ೧೭೫ ತಾಲ್ಲೂಕುಗಳಲ್ಲಿ ಗೋಡೌನುಗಳು ಇಲ್ಲ ಎನ್ನುವುದನ್ನು ನಾನು ಒಪ್ಪುವುದಕ್ಕೆ ತಯಾರು ಇಲ್ಲ. ಒಂದೆರಡು ಕಡೆ ಇಲ್ಲದೆ ಇರಬಹುದು. ಅವಶ್ಯಕವಾದರೆ, ನಾವು ಗೋಡೌನ್ ಅನ್ನು ಹೊರೆಗೆ ತೆಗೆದುಕೊಂಡು ಫೆಸಿಲಿಟೀಸ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಎಚ್. ಹನುಮೇಗೌಡ.—ಹಳ್ಳಿಯಲ್ಲಿ ಲಕ್ಷಾಂತರ ಜನರ ಮನೆಗಳು ಸಾಲ ಕಟ್ಟದೆ ಇರುವುದಕ್ಕೆ ಹರಾಜು ಆದುವು. ಗೋಡೌನ್ ಫೆಸಿಲಿಟೀಸ್ ಇಲ್ಲ ಮತ್ತು ರೈತರ ಧಾನ್ಯಗಳನ್ನು ಕೊಂಡುಕೊಳ್ಳುವುದಕ್ಕೆ ದುಡ್ಡು ಕೊಟ್ಟಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಎಲ್ಲಾ ತಾಲ್ಲೂಕು ಸೊಸೈಟಿಗಳಲ್ಲಿ ಕ್ಯಾಷ್ ಮತ್ತು ಕ್ರೆಡಿಟ್ ಲೋನ್ ಲಿಮಿಟ್ ಅನ್ನು ಮಂಜೂರು ಮಾಡಿರುತ್ತಾರೆ. ಆಯಾ ತಾಲ್ಲೂಕು ಸೊಸೈಟಿಗಳು ಅದನ್ನು ಉಪಯೋಗ ಮಾಡಿಕೊಳ್ಳಬೇಕು. ಸೊಸೈಟಿಯವರು ಸುಮ್ಮನೆ ಡಿ ಸಿ ಸಿ ಬ್ಯಾಂಕ್‌ನಿಂದ ಹಣವನ್ನು ಏಕೆ ತೆಗೆದು ಕೊಂಡು ಬರುತ್ತಾರೆ? ಆದ್ದರಿಂದ ಜನರು ಕ್ಯಾಷ್ ಕ್ರೆಡಿಟ್ ಲಿಮಿಟ್ ಅನ್ನು ಉಪಯೋಗಮಾಡಿ ಕೊಳ್ಳಬೇಕು.

(*iii*) *re : forcible collection of wet assessment plus water rate by Revenue authorities in Sakalespur, Alur and Belur taluks.*

SRI K. M. RUDRAPPA (Saklespur).— I call the attention of the Minister for Revenue regarding hardship and harassment caused to the ryots in Sakleshpur Sub Division due to forcibly demanding and collecting water rate plus wet assessment.

SRI N. HUTCHAMASTHY GOWDA (Minister for Revenue).— I wish to make the following statement :

In the calling Attention Notice tabled by the Member, Sri K. M, Rudrappa, it is alleged that in Sakleshpur Sud-Division namely Saklesbpur, Alur and Belur Taluks and particularly in Sakleshpur Taluk, Revenue authorities are forcibly demanding and collecting water rate plus wet assessment even though there are clear orders of Government that water rate and dry assessment is to be collected wherever water rate is imposed and that they are taking coercive steps to collect the accumulated arrears of 10 years in one lump sum which has caused lot of hardship and harassment to ryots.

The matter has been enquired into. The Deputy Commissioner Hassan District, has reported that as per Circular No. RD 113 SST 70 dated 11-6-1970 and No. RD 385 SST 72 dated 29-11-1972, only dry rate of assessment and water rate is leviable on wet and garden lands irrigated by Government source of water and the Assistant Commissioners are authorised to rectify the wet assessment into dry on the said lands. At the time of revision of Survey Settlement during 1965, the akarband in respect of Sakleshpur Sub-Division was prepared fixing the consolidated wet assessment even on the wet and garden lands irrigated by Government source of water, whereas in Maidan parts, i.e., Hassan Sub-Division the dry rate has been fixed in the akarbands on the said lands. On the basis of akarbands prepared during 1965, the consolidated wet assessment was being booked and collected in Sakleshpur Sub-Division, during the respective years i.e., for 1965-66 and onwards.

As per Government Notification dated 13-7-1971, the water rate at revised rates was leviable on wet and garden lands irrigated by Government source of water respectively with effect from 1965-66, under section 10 of the Karnataka irrigation Act 1957. The booking of water rate at revised rates retrespectively from 1965-66 was commenced during 1971-72 and completed during 1974-75. Since this item of work was completed by the special staff appointed for this purpose and the wet consolidated assessment was already booked and collected during the respective years, it could not be rectified at the time of booking of water rate. However, after noticing these defects in 1974, instructions have been issued to the concerned officers to work out the dry components in respect of wet and garden lands which come under Govt. source of water and that the excess assessment booked and collected should be given set off towards the outstanding arrears of water rate against each khatha.

The process of conversion of wet assessment into dry being cumbersome process took considerable time and so far, this item of work has been completed in the entire taluk of Alur and Belur and 149 villages in Sakleshpur Taluk as against 1977 villages. The set off has been given from 1974-75 in respect of Alur and Belur Taluks and Yeslur Hobli in Sakleshpur Taluk. Set off for other years, i.e., from 1965-66 to 1973-74 will also be given and suitable instructions have been given to the concerned Tahsildar.

Consequent on the conversion of wet assessment into dry, the excess assessment booked (difference) to be given set off towards the outstanding arrears. and the outstanding arrears under water rate in each taluk are as follows:—

Name of the Taluk	Excess amount booked (difference) for which set off to be given (Approx. figure)	Outstanding water rate arrears
1. Sakleshpur	Rs. 6.5 lakhs	Rs. 11,16,285 as on 1-7-1975
2. Belur	Rs. 5.0 lakhs	Rs. 11,31,693 as on 29-2-1976
3. Alur	Rs. 3.0 lakhs	Rs. 15,00,000 as on 29-2-1976
Total	Rs. 14.5 lakhs	Rs. 37,47,978

Considering the outstanding arrears in each Taluk, which has been accumulated from the last 10 years, even after giving set off of the difference of assessment, there remains more than 50% of the arrears for recovery. The effective collections have commenced only during this year by issuing demand notices in accordance with rules and no ryots have been harassed. The Tahsildars have been instructed to complete the work of conversion and note the difference to be given set off in respect of each 'kula' and collect the balance only as per rules.

From the above details, it can be seen that no hardship or harassment has been caused to ryots as alleged by the Member.

ಶ್ರೀ ಕೆ. ಎಂ. ರುದ್ರಪ್ಪ.— ಮಾನ್ಯ ಅಧ್ಯಕ್ಷರೇ, ಈ ಆಕಾರಬಂದ್‌ಗಳಲ್ಲಿ ನ್ಯೂನತೆ ಇವೆ, ಅದನ್ನು ಸರಿಪಡಿಸುತ್ತೇವೆಂದು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ ಸಂತೋಷ. ಆದರೆ ಸಕಲೇಶಪುರ ತಾಲ್ಲೂಕುನಲ್ಲಿ ಇದು ಏನೂ ಸರಿಯಾಗಿಲ್ಲ. ಅಧಿಕಾರಿಗಳು ತಮ್ಮ ಡಿಮ್ಯಾಂಡ್ ಪ್ರಕಾರ ಅರಿಯರ್ಸ್, ಅನ್ನು ಕಲೆಕ್ಟ್ ಮಾಡುವುದಕ್ಕೆ ಹೊರಟಿದ್ದಾರೆ. ಹಿಂದಿನ ವರ್ಷದ ಬಾಕಿಯನ್ನು ಒಂದೇ ವರ್ಷದಲ್ಲಿ ಕೊಡಬೇಕು ಎಂದರೆ ಕಷ್ಟವಾಗುತ್ತದೆ. ಆಹಾರ ಪದಾರ್ಥಗಳ ಬೆಲೆಗಳು ಇಳಿದು ಹೋಗಿವೆ. ಆದ್ದರಿಂದ ಇದನ್ನು ಒಂದೇ ಕಂತಿನಲ್ಲಿ ಕೊಡಬೇಕು ಎಂದರೆ ಕಷ್ಟವಾಗುತ್ತದೆ. ಮಾನ್ಯ ಸಚಿವರು ತಮ್ಮ ರೆವಿನ್ಯೂ ಡಿಮ್ಯಾಂಡ್ ಬಂದಾಗ ಈ ಬಾಕಿಯನ್ನು ಬಲಾತ್ಕಾರ ಮಾಡುವುದಿಲ್ಲ ಎಂದು ಹೇಳಿದ್ದರು. ಒಂದು ವರ್ಷದ ಅರಿಯರ್ಸ್ ಮತ್ತು ಈಗಿನ ಬಾಕಿಯನ್ನು ಸೇರಿಸಿ ವಸೂಲು ಮಾಡುವಂತೆ ತಾವು ನಿರ್ದೇಶನ ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಇದರಲ್ಲಿ ಇನ್ನೊಂದು ನ್ಯೂನತೆ ಇದೆ. ವಾಟರ್ ಸೋರ್ಸ್ ಇಲ್ಲದೇ ಇರುವ ಕಡೆಯಲ್ಲಿಯೂ ಕೂಡ ಇದನ್ನು ಗೊತ್ತು ಮಾಡಿದ್ದಾರೆ. ಕೆಲವು ಕಡೆ ಕೆರೆ ಕಟ್ಟೆಗಳು ಬತ್ತಿ ಹೋಗಿವೆ, ಅಲ್ಲಿ ಬೆಳೆಯಾಗಿಲ್ಲ, ಅಂಥ ಕಡೆಗಳಲ್ಲಿ ವಾಟರ್ ರೇಟ್ ಹಾಕಿದ್ದಾರೆ. ಆದುದರಿಂದ ಇದನ್ನು ಸರಿಪಡಿಸಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಈ ವಿಷಯದಲ್ಲಿ ಒಂದು ಮಾತು ಹೇಳುತ್ತೇನೆ. ಸಕಲೇಶಪುರ ತಾಲ್ಲೂಕಿನಲ್ಲಿ ೧೪೭ ಗ್ರಾಮಂಗಳ ಪೈಕಿ ೧೨೪ ಗ್ರಾಮಂಗಳಲ್ಲಿ ಈ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಇನ್ನು ಉಳಿದ ತಾಲ್ಲೂಕಂಗಳಲ್ಲಿಯೂ ಮಾಡಬೇಕೆಂದು ಅಧಿಕಾರಿಗಳಿಗೆ ತಿಳಿಸಿದ್ದೇನೆ. ಅದರಂತೆ ಅವರು ಕೂಡ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ. ಮಾನ್ಯ ಸದಸ್ಯರು ಇನ್ನೊಂದು ಮಾತು ಹೇಳಿದರು. ೧೦ ವರ್ಷಗಳ ಕಂದಾಯವನ್ನು ಒಟ್ಟಿಗೆ ಕಲೆಕ್ಟ್ ಮಾಡುವುದು ಸರಿಯಲ್ಲ, ಇದರಿಂದ ರೈತರಿಗೆ ತೊಂದರೆ ಯಾಗುತ್ತದೆ, ಆದುದರಿಂದ ಇದನ್ನು ಸುಲಭ ಕಂತಂಗಳಲ್ಲಿ ಕಲೆಕ್ಟ್ ಮಾಡಬೇಕೆಂದು ಹೇಳಿದ್ದಾರೆ. ನಾನು ಹೇಳುವುದೇನೆಂದರೆ ಇವತ್ತು ರೈತರ ಮೇಲೆ ನಾವು ದುಡ್ಡನ್ನು ಬಿಟ್ಟರೆ ಅವರಿಗೇ ಕಷ್ಟವಾಗುತ್ತದೆ. ಆದುದರಿಂದ ಇದನ್ನು ವಸೂಲು ಮಾಡುವುದಕ್ಕೆ ಕ್ರಮ ಕೈಗೊಂಡೆವು. ಆರೀತಿ ಮಾಡಿದ್ದರಿಂದ ೧೪ ಲಕ್ಷ ರೂಪಾಯಿ ವಸೂಲಾಗಿದೆ. ಇದನ್ನು ಈಗ ಹೊಸದಾಗಿ ಏನೂ ನಾವು ವಸೂಲು ಮಾಡುತ್ತಿಲ್ಲ. ಆದನ್ನು ಯಾರಿಂದ ವಸೂಲು ಮಾಡುತ್ತಿದ್ದೇವೆ ಎಂದರೆ ಯಾರು ಅನುಕೂಲಸ್ಥರು ಇದ್ದಾರೆ ಕೊಡುವುದಕ್ಕೆ ಶಕ್ತಿ ಇದೆ ಅಂಥವರಿಂದ ವಸೂಲು ಮಾಡುತ್ತಿದ್ದೇವೆ, ಅವರಿಂದಲೂ ನಾವು ವಸೂಲು ಮಾಡದಿದ್ದರೆ ರಸ್ತೆಗಳ ಕಾಂಗಾರಿಗಳಿಗೆ ಹಣ ಬೇಕಾಗುತ್ತದೆ, ಕೆರೆಕಟ್ಟೆಗಳ ನಿರ್ಮಾಣ, ರಿಪೇರಿ ಮುಂತಾದುವುಗಳಿಗೆಲ್ಲಾ ಲಕ್ಷಾಂತರ ರೂಪಾಯಿ ಹಣ ಬೇಕಾಗುತ್ತದೆ. ಇದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಆದುದರಿಂದ ಹಿಂದಿನ ಬಾಕಿ ಹಣ ವನ್ನು ಸ್ವಲ್ಪ ಸ್ವಲ್ಪವಾಗಿ ಕೊಡಬೇಕೆಂದು ಹೇಳುತ್ತೇವೆ.

ಶ್ರೀ ಕೆ. ಹೆಚ್. ಹನುಮೇಗೌಡ.— ಹಿಂದೆ ೨–೩ ವರ್ಷ ಎಲ್ಲೆಲ್ಲೂ ಮಳೆಬೆಳೆಗಳಾಗದೇ ಹೋಯಿತು ಎಂದು ಸರ್ಕಾರದವರು ರಿಲೀಫ್ ವರ್ಕ್ಸ್ ಮಾಡಿಸಿದ್ದೀರಲ್ಲಾ ಆ ವರ್ಷಕ್ಕೂ ಕೂಡ ಕಂದಾಯವನ್ನು ವಸೂಲು ಮಾಡುತ್ತಿದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಮಾನ್ಯ ಅಧ್ಯಕ್ಷರೆ, ಇದಕ್ಕೆ ಸ್ಪಷ್ಟವಾಗಿ ಸರ್ಕಾರದ ಆಜ್ಞೆ ಇದೆ. ಯಾವ ವರ್ಷ ಮಳೆ ಬಾರದೆ ಬೆಳೆ ಆಗುವುದಿಲ್ಲ ಆ ವರ್ಷದ ಕಂದಾಯವನ್ನು.....

ಶ್ರೀ ಕೆ. ಹೆಚ್. ಹನುಮೇಗೌಡ.— ತಾವು ಹೇಳುವುದು ಏನು ಎಂದು ನಮಗೂ ಗೊತ್ತಿದೆ. ಈಗಿನ ವರು ಹಿಂದೆ ಆದುದನ್ನೆಲ್ಲಾ ಪಟ್ಟಿಮಾಡಿ ಕೊಡುವುದಕ್ಕಾಗುತ್ತದೆಯೇ ? ಸಾಧ್ಯವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.— ತಾವು ಇಲ್ಲಿ ಈ ರೀತಿ ಹೇಳುವುದಕ್ಕೆ ಬದಲು ಆ ಸ್ಥಳಗಳಲ್ಲಿ ಒಂದೆರಡು ಸಾರಿ ಪ್ರವಾಸ ಮಾಡಿ, ಹೀಗೆ ಮಾಡಿ ಎಂದು ಹೇಳಿದ್ದರೆ ಆಗಲೇ ಇದು ಆಗುತ್ತಿತ್ತು.

ಶ್ರೀ ಕೆ. ಹೆಚ್. ಹನುಮೇಗೌಡ.— ನಿಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದರು ? ಅವರು ಟಾಂ ಟಾಂ ಹೊಡೆದು ಹೇಳಬೇಕಾಗಿತ್ತು. ಅವರೇನು ಸಂಬಳ ತೆಗೆದುಕೊಳ್ಳುವುದಿಲ್ಲವೇ ? ನೀವು ನಮಗೆ ಏತಕ್ಕೆ ಹೇಳುತ್ತೀರಿ ?

ಅಧ್ಯಕ್ಷರು.— ಮಾನ್ಯ ಸದಸ್ಯರು ಸ್ವಲ್ಪ ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಕೆ. ಹೆಚ್. ಹನುಮೇಗೌಡ.— ನಾನು ತಮ್ಮ ಮೂಲಕ ಮಂತ್ರಿಗಳಿಗೆ ಹೇಳುತ್ತಿದ್ದೇನೆ. ಇವತ್ತಿನ ದಿವಸ ನೀವು ಈ ರೀತಿ ಮಾಡಿದರೆ ಅಲ್ಲಿ ರೈತರು ಉಳಿಯಬೇಕೋ ಬೇಡವೋ ?

ಅಧ್ಯಕ್ಷರು.— ಮಾನ್ಯ ಸದಸ್ಯರು ನನ್ನ ಜೊತೆಯಲ್ಲೂ ವಾದ ಮಾಡುತ್ತಾರೆಯೇ ? ಇನ್ನೊಂದು ಸಾರಿ ಅವರು ಈ ರೀತಿ ಮಾತನಾಡಿದರೆ ನಾನು ಅವರನ್ನು ಹೊರಗಡೆ ಕಳುಹಿಸಬೇಕಾಗುತ್ತದೆ.

ಶ್ರೀ ಕೆ. ಹೆಚ್. ಹನುಮೇಗೌಡ.— ನೀವು ಹೀಗೆ ಮಾತನಾಡುವುದಾದರೆ ನಾವು ಇಲ್ಲಿಗೆ ಏತಕ್ಕೆ ಬ ಬೇಕಾಗಿತ್ತು ? ಜನ ನಮ್ಮನ್ನು ಆರಿಸಿ ಕಳುಹಿಸಿದ್ದಾರೆ.

ಶ್ರೀ ಕೆ. ಹೆಚ್. ರಂಗನಾಥ್.— ಮಾನ್ಯ ಅಧ್ಯಕ್ಷರೆ, ತಾವು ನಿಂತಿರುವಾಗ ಮಾನ್ಯ ಸದಸ್ಯರೂ ನಿಂತು ಕೊಂಡು ಮಾತನಾಡಬಹುದೆ ?

ಅಧ್ಯಕ್ಷರು.— ಅವರು ಮಾತನಾಡುವಾಗ ಮೈಮೇಲೆ ಪ್ರಜ್ಞೆ ಇಲ್ಲದಂತೆ ಮಾತನಾಡುತ್ತಾರೆ.

ಶ್ರೀ ಕೆ.ಹೆಚ್. ಹನುಮೇಗೌಡ.—ನಾವು ಏನು ಮಾತನಾಡಿದರೂ ಅವರಿಗೆ ಕೇಳುತ್ತಲೇ ಇಲ್ಲ. ೨–೩ ಕಂತುಗಳನ್ನು ಕೊಡಿ ಎಂದು ನಾವು ಕೇಳುತ್ತೇವೆ. ನೀವು ಅವರಿಗೆ ೨–೩ ಕಂತುಗಳನ್ನು ಕೊಡುವು ದರಿಂದ ನಿಮಗೇನೂ ತೊಂದರೆಯಾಗುವುದಿಲ್ಲ. ನೀವು ಈ ರೀತಿ ಮಾಡಿದರೆ ದೇಶ ಹಾಳಾಗುತ್ತದೆಯೆ? ಯಾರು ನೀಮಗೋಸ್ಕರ ಇದ್ದಾರೆಯೋ ಅವರನ್ನು ಹಾಳುಮಾಡುವುದಕ್ಕೆ ಹೊರಟಿದ್ದೀರಿ. ನಾವು ಕೇಳುತ್ತಿರುವುದು ಒಂದು ಕಂತು ಬೇಡ ಮೂರು ಕಂತು ಕೊಡಿ ಎಂದು.

ಶ್ರೀ ಕೋಣಂಡೂರು ಲಿಂಗಪ್ಪ,—ಮಾನ್ಯ ಹನುಮೇಗೌಡರು ಏನು ಹೇಳುತ್ತಿದ್ದಾರೆ ಅದು ಸರಿಯಾಗಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನು ಹೇಳುವುದಕ್ಕಿಂತ ಮುಂಚೆಯೇ ಮಾನ್ಯ ಹನುಮೇಗೌಡರೂ, ಮಾನ್ಯ ಲಿಂಗಪ್ಪನವರೂ ಎದ್ದುನಿಂತುಕೊಂಡರೆ ನಾನು ಏನು ಹೇಳುವುದು? ತಾವೇ ಅಪ್ಪಣೆ ಕೊಡಿಸಿದ್ದೀರಿ, ಅವರು ಮೈಮೇಲೆ ಪ್ರಜ್ಞೆ ಇಲ್ಲದಂತೆ ಮಾತನಾಡುತ್ತಾರೆ ಎಂದು. ನನಗೂ ಪದಗಳನ್ನು ಉಪಯೋಗಿಸುವುದು ಬರುತ್ತದೆ. ಇಲ್ಲಿ ನೀವು ಗಲಾಟೆ ಮಾಡುತ್ತೀರಿ ಎಂದು ಅಲ್ಲಿ ಜನರು ಓಟು ಕೊಡುವುದಿಲ್ಲ.

(ಗೊಂದಲ)

ಶ್ರೀ ಕೆ.ಹೆಚ್. ಹನುಮೇಗೌಡ.—ಮಾನ್ಯ ಅಧ್ಯಕ್ಷರೆ, ನಾವು ಓಟಿ ಗೋಸ್ಕರ ಇರುವ ಜನ ಎಂದು ಹೇಳುತ್ತಾರೆ, ಇದು ಸರಿಯೇ? ಆದರೆ ನಾವು ಓಟಿಗೋಸ್ಕರ ಇರುವ ಜನ ಅಲ್ಲ. ನೀವು ದೇಶದ ಸ್ಥಿತಿಗತಿಗಳನ್ನು ಸರಿಮಾಡಿ ಎಂದು ನಾವು ಕೇಳುತ್ತಿರುವುದು. ನಾನು ಇನ್ನೊಂದು ಸಾರಿ ಮೆಂಬರ್ ಆಗಿ ಬರದೆ ಹೋದರೆ ಅಷ್ಟೇ ಹೋಯಿತು. ನನಗೆ ಈ ಸ್ಥಾನ ಇನ್ನೊಂದು ಸಾರಿ ಸಿಕ್ಕದಿದ್ದರೆ ಅಷ್ಟೇ ಹೋಯಿತು.

ಅಧ್ಯಕ್ಷರು.—ಈಗ ಮಾನ್ಯ ಸದಸ್ಯರನ್ನು ಹೊರಗಡೆಗೆ ಕಳುಹಿಸಬೇಕಾಗುತ್ತದೆ.

ಶ್ರೀ ಕೆ.ಹೆಚ್. ಹನುಮೇಗೌಡ.—ನಾವು ಓಟಿಗೋಸ್ಕರ ಮಾತನಾಡುತ್ತಿದ್ದೇವೆಯೇ? ದೇಶದ ಜನತೆಯ ಕಷ್ಟದ ಬಗ್ಗೆ ಹೇಳಿದರೆ, ಓಟಿಗೋಸ್ಕರ ಮಾತನಾಡುತ್ತಿದ್ದೀರಿ ಎಂದು ಹೇಳುತ್ತಾರೆ. ಇದು ಸರಿಯೆ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೆ, ಇದನ್ನು ಕೆಣಕಿದಷ್ಟೂ ಜಾಸ್ತಿಯಾಗುತ್ತಲೇ ಹೋಗುತ್ತದೆ. ಆದುದರಿಂದ ನಾನು ಇಷ್ಟಕ್ಕೆ ಸುಮ್ಮನಾಗುತ್ತೇನೆ. ೧೦ ವರ್ಷದ ಬಾಕಿಯನ್ನು ಒಟ್ಟಿಗೇ ವಸೂಲು ಮಾಡುವುದಕ್ಕಾಗುವುದಿಲ್ಲ. ಇದು ನನಗೂ ಗೊತ್ತಿದೆ, ನಮ್ಮ ಅಧಿಕಾರಿಗಳಿಗೂ ಗೊತ್ತಿದೆ. ಆದರೆ ಇದನ್ನು ಕೊಡುವ ಶಕ್ತಿಯಾರಲ್ಲಿ ಇರುತ್ತದೋ ಅವರಿಂದ ವಸೂಲು ಮಾಡುತ್ತಿದ್ದೇವೆ. ಕೊಡಲು ಶಕ್ತಿ ಇಲ್ಲದಿರುವವರಿಗೆ ಕಂತುಗಳನ್ನು ಕೊಡಿ ಎಂದು ಅಧಿಕಾರಿಗಳಿಗೆ ತಿಳಿಸುತ್ತೇನೆ ಮಾನ್ಯ ಸದಸ್ಯರಿಗೆ ಬಡ ರೈತರ ಬಗ್ಗೆ ಎಷ್ಟು ಅನುಕಂಪ, ಅಭಿಮಾನ ಇದೆಯೋ ಅಷ್ಟೇ ಅನುಕಂಪ, ಅಭಿಮಾನ ರೈತರ ಮೇಲೆ ನನಗೂ ಇದೆ ಎಂಬುದನ್ನು ಹೇಳುತ್ತೇನೆ. ಮಾನ್ಯ ರುದ್ರಪ್ಪನವರು ಏನು ಹೇಳಿದರು ಎಂದರೆ ಹಿಂದಿನಿಂದ ಲೆಕ್ಕಪತ್ರಗಳನ್ನು ಮಾಡಿಲ್ಲ. ಕೆಲವು ಕೆರೆಗಳ ಹಿಂದೆ ನೀರಿನ ಸೌಲಭ್ಯ ಇಲ್ಲದಿದ್ದರೂ ಅಲ್ಲ ವಾಟರ್ ರೇಟ್‌ನ್ನು ಹಾಕಿದ್ದಾರೆ ಎಂದು ಹೇಳಿದರು. ಮತ್ತು ಅಲ್ಲಿ ಯಾವ ತೊಂದರೆ ಇದೆ ಎಂದರೆ ರೈನ್‌ಷಾಡೋ ಏರಿಯಾ, ಆಗಿದ್ದು ಸಣ್ಣ ಕೆರೆ ಇದ್ದರೆ ಅಚ್ಚು ಕಟ್ಟಿಗೆ ಕೆರೆ ನೀರು ಸರಿಯಾಗಿ ಸಿಕ್ಕುವುದಿಲ್ಲ ಅಂಥ ಕಡೆ ವಾಟರ್ ರೇಟ್ ವಜಾಮಾಡಿ ಎಂದು ಈ ಮೂರು ವಿಷಯಗಳನ್ನು ಅವರು ತಿಳಿಸಿದ್ದಾರೆ. ಮಲೆನಾಡು ಭಾಗದಲ್ಲಿ ಅಂದರೆ ಶಿವಮೊಗ್ಗ, ಚಿಕ್ಕಮಗಳೂರು, ರೈನ್ ಷಾಡೋ ಏರಿಯಾದಲ್ಲಿ ತೊಂದರೆ ಇರುವುದು ನಮ್ಮ ಅಧಿಕಾರಿಗಳಿಗೆ ತಿಳಿಸಿದ್ದೇನೆ. ಎಲ್ಲಿ ಸಣ್ಣ ಕೆರೆಗಳ ಅಚ್ಚುಕಟ್ಟು ಸೌಲಭ್ಯವಾಗುತ್ತಿಲ್ಲ, ಅಂಥ ಕಡೆ ತೆರಿಗೆಗಳನ್ನೂ ಕಡಿಮೆ ಮಾಡಬೇಕೆಂದೂ ಕೂಡ ತಿಳಿಸಿರುತ್ತೇನೆ. ಅದರ ಮೇಲೆ ಅವರು ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಕೆ. ಎಂ. ರುದ್ರಪ್ಪ,—ಮಾನ್ಯ ಅಧ್ಯಕ್ಷರೆ ರವಿನ್ಯೂ ಸಚಿವರಿಗೆ ಅರಿಕೆ ಮಾಡಿಕೊಳ್ಳುತ್ತೇನೆ, ರೈತರಿಗೆ ಸಹಾಯ ದೊರಕಿಸಿಕೊಡುವುದರ ಬಗ್ಗೆ ಅವರ ಗಮನಕ್ಕೆ ತರಬಯಸುತ್ತೇನೆ. ಎರಡು ಮೂರು ಜನ ರೈತರು ತೊಂದರೆಗೆ ಒಳಗಾಗಿ ದೇಶಾಂತರ ಕೂಡ ಹೋಟು ಹೋಗಿರುತ್ತಾರೆ. ಕೆಲವರು ಆತ್ಮ ಹತ್ಯೆಯನ್ನೂ ಕೂಡ ಮಾಡಿಕೊಂಡಿರುತ್ತಾರೆ. ಇದನ್ನು ನಾನು ಯಾವ ಉತ್ಪ್ರೇಕ್ಷೆಯಿಂದಲೂ ಕೂಡ ಹೇಳುತ್ತಿಲ್ಲ. ಎರಡನೆಯದಾಗಿ ನೀರಿನ ಅನುಕೂಲತೆ ಇಲ್ಲದಿದ್ದರೂ ವಾಟರ್ ರೇಟನ್ನು ಸುಮಾರು ೮ ನೂರು ರೂಪಾಯಿಗಳಿಂದ ೯ ನೂರು ರೂಪಾಯಿಗಳವರೆಗೂ ಅಸಿಸ್ಟೆಂಟ್ ಕಮಿಷನರ್‌ರವರು ಕಾನೂನು ರೀತ್ಯ ವಸೂಲು ಮಾಡುತ್ತಿರುತ್ತಾರೆ. ರೈತರು ಕೊಡದಿದ್ದರೆ ವಿನಾಸ ಪ್ರಕಾರ ಜೈಲಿಗೂ ಕೂಡ ಕಳುಹಿಸುತ್ತೇವೆಂದು ಹೇಳುತ್ತಾರೆ. ಈ ರೀತಿಯಾದ ತೊಂದರೆಯನ್ನು ಕೊಡಬಾರದೆಂದು ಅಧಿಕಾರಿಗಳಿಗೆ ನಿರ್ದೇಶನ ಕೊಡಬೇಕು. ಬಾಕಿ ನಿಂತಿರುವುದನ್ನು ಅಂದರೆ ಹೋದ ವರ್ಷದನ್ನು ಮಾತ್ರ ವಸೂಲು

ಮಾಡಲು ಅವಕಾಶವನ್ನು ಮಾಡಿಕೊಡಬೇಕು. ಮತ್ತು ಆಲೂರು ತಾಲ್ಲೂಕಿನಲ್ಲಿ ಕ್ಷಾಮ ಬಂದು ಸರ್ಕಾರದವರು ಲ್ಯಾಂಡ್ ಅಸೆಸ್‌ಮೆಂಟ್ ಮಾಡಬೇಕೆಂದು ತೀರ್ಮಾನ ಮಾಡಿರುತ್ತಾರೆ. ಹೀಗಿದ್ದರೂ ಅಲ್ಲಿಯ ಅಧಿಕಾರಿಗಳು ರೆವಿನ್ಯೂ ವನ್ನು ವಸೂಲು ಮಾಡುತ್ತಿರುತ್ತಾರೆ. ವಸೂಲು ಮಾಡಬಾರದೆಂದು ಅಧಿಕಾರಿಗಳಿಗೆ ನಿರ್ದೇಶನ ಕೊಡಬೇಕೆಂದು ತಮ್ಮ ಮುಖಾಂತರ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಎಲ್ಲೆಲ್ಲಿ ರೈತರಿಗೆ ತೊಂದರೆಯಾಗಿರುತ್ತದೆ, ಕಂತಿನ ರೂಪದಲ್ಲಿ ಎಲ್ಲೆಲ್ಲಿ ಕೊಡುತ್ತಿರುತ್ತಾರೆ ಅಲ್ಲೆಲ್ಲ ವಸೂಲು ಮಾಡಬಾರದೆಂದು ತಿಳಿಸಿರುತ್ತೇನೆ. ಮೇಲಿನ ಅಧಿಕಾರಿಗಳಿಗೂ ವಿರುದ್ಧವಾಗಿ ತೆರಿಗೆಯನ್ನು ಹಾಕಿದ್ದರೆ ಅಂಥ ಸಂದರ್ಭದಲ್ಲಿಯೂ ಕೂಡ ವಸೂಲು ಮಾಡ ಬಾರದೆಂದು ಅಧಿಕಾರಿಗಳಿಗೆ ತಿಳಿಸಿಕೆ ಕೊಡುತ್ತೇನೆಂದು ಮಾನ್ಯ ಸದಸ್ಯರಿಗೆ ತಿಳಿಸಲು ಇಚ್ಛಿಪಡುತ್ತೇನೆ.

Papers laid on the Table

SRI M. MOHAMMED ALI (Minister for Transport and Tourism).—I beg to lay:

> 13th Annual Administration Report of the Karnataka Road Transport Corporation for the year 1973–74, under section 35 (3) of the Road Transport Corporation Act 1950.

MADAM SPEAKER.—The Report is laid.

SRI M. S. KRISHNAN.—We have been finding in the House that the Administration Reporters of those departments or corporations are laid on the Table very late. They are all outmoded reports in the sense that reports of two or three years earlier are placed. I do not know whether this House is not competent to be given at least the report pertaining to 1974–75, I request the Hon'ble Minister to see that these reports for at least 1974–75 are given and not the such old ones. I would like the Hon'ble Minister to assure that a thing will be done.

SRI M. MOHAMMED ALI.—I shall try to see that report for 1974–75 is laid on the Table as early as possible.

KARNATAKA APPROPRIATION (No. 3) BILL 1976.
Introduction

MADAM SPEAKER.—I have received the following message from the Governor :

> In pursuance of Clauses (1) and (3) of Art. 207, of the Constitution of India, I, Uma Shankar Dikshit, Governor of Karnataka, do hereby recommend that the Karnataka Appropriation (No. 3) Bill, 1976, be introduced in and considered by the Karnataka Legislative Assembly.

SRI M. Y. GHORPADE.—I beg leave to introduce the Karnataka Appropriation (No. 3) Bill, 1976.